<u>ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿರವರ ನ್ಯಾಯಾಲಯ, ಅರಕಲಗೂಡು</u>

**<u>ಸಿ.ಸಿ.ನಂಃ59/2019</u>**

ದಿನಾಂಕಃ **20/12/2019**

ಫಿರ್ಯಾದಿ :- ಆರಕ್ಷಕ ಉಪ-ನಿರೀಕ್ಷಕರು,
ಅರಕಲಗೂಡು ಪೊಲೀಸ್ ಠಾಣೆ,
ಅರಕಲಗೂಡು

ವಿರುದ್ಧ

ಆರೋಪಿಗಳು :- ಶಿವೇಗೌಡ ಬಿನ್ ದೇವೇಗೌಡ ಮತ್ತು ಇತರರು

<u>:: ದೋಷಾರೋಪಣೆ ::</u>

ಶ್ರೀ.ಯೋಗೇಶ್, ಎಂ.ಎ. ಎಲ್.ಎಲ್.ಬಿ., ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಅರಕಲಗೂಡು ಆದ ನಾನು,

ಆರೋಪಿಗಳು :1: ಶಿವೇಗೌಡ ಬಿನ್ ದೇವೇಗೌಡ, **55** ವರ್ಷ

2. ಕೆಂಚಯ್ಯ ಬಿನ್ ಶಿವೇಗೌಡ , 24 ವರ್ಷ,

3. ಅನಿತ ಕೋಂ ಸುನಿಲ್ , 26 ವರ್ಷ,

4. ನಾಗಮಣಿ ಕೋಂ ಶಿವೇಗೌಡ, 46 ವರ್ಷ,
1 , 2 ಮತ್ತು 4 ನೇ ಆರೋಪಿತರ ವಾಸಃ ನೈಗೆರೆ ಗ್ರಾಮ,
ಕಸಬಾ ಹೋಬಳಿ, ಅರಕಲಗೂಡು ತಾಲ್ಲೂಕು

5. ಸುನಿಲ್ ಬಿನ್ ನಂಜುಂಡ, 29 ವರ್ಷ,
1 ಮತ್ತು 5 ನೇ ಆರೋಪಿತರ ವಾಸಃ
ಹೊನ್ನವಳ್ಳಿ ಗ್ರಾಮ, ಕಸಬಾ ಹೋಬಳಿ,
ಅರಕಲಗೂಡು ತಾಲ್ಲೂಕು

ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ-

ದಿನಾಂಕ **06/11/2018** ರಂದು ಮಧ್ಯಾಹ್ನ **2-00** ಗಂಟೆ ಸಮಯದಲ್ಲಿ ಅರಕಲಗೂಡು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ನೈಗೆರೆ ಗ್ರಾಮದ ಚಾಸಾ-**1** ರವರು ತಮ್ಮ ಮನೆಯ ಮುಂದೆ ವಿದ್ಯುತ್ ಕಂಬಕ್ಕೆ ಬಲ್ಬ ಹಾಕಿಲ್ಲ ಎಂದು ಮೆಂಬರನ್ನು ಕೇಳುತ್ತಿದ್ದಾಗ ಆರೋಪಿತರಾದ ನೀವು ಅಪರಾಧ

ಮಾಡುವ ಸಮಾನ ಉದ್ದೇಶದಿಂದ ಚಾಸಾ-1 ರವರಿಗೆ ನಿಮ್ಮ ಅಪ್ಪನ ಮನೆ ಕಂದಾಯ ಕಟ್ಟುವವನು ಸೂಳೆಮುಂಡೆ ಕತ್ತೆ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದ್ದು, ನೀವು ಭಾ.ದಂ.ಸಂ.ಕಲಂಃ504 ಸಹವಾಚಕ ಕಲಂಃ149 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವುಗಳು ಅಪರಾಧವೆಸಗುವ ಸಮಾನ ಉದ್ದೇಶದಿಂದ ಚಾಸಾ-1 ರವರಿಗೆ ನಿಮ್ಮ ಅಪ್ಪನ ಮನೆ ಕಂದಾಯ ಕಟ್ಟುವವನು ಎಂದು ಚಾಸಾ-1 ರವರ ಮನೆಗೆ ಅತಿಕ್ರಮ ಪ್ರವೇಶ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದ್ದು, ನೀವು ಭಾ.ದಂ.ಸಂ.ಕಲಂಃ447 ಸಹವಾಚಕ ಕಲಂಃ149 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವುಗಳು ಅಪರಾಧವೆಸಗುವ ಸಮಾನ ಉದ್ದೇಶದಿಂದ ಚಸಾ-1 ರವರನ್ನು ಹಿಡಿದು ಎಳೆದಾಡಿ ಅವರ ಮಾನಕ್ಕೆ ಕುಂದುಂಟಾಗುವಂತೆ ಮಾಡಿ ಜಗಳ ತೆಗೆದಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದ್ದು, ನೀವು ಭಾ.ದಂ.ಸಂ.ಕಲಂಃ354 ಸಹವಾಚಕ ಕಲಂಃ149 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ನಾಲ್ಕನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವುಗಳು ಅಪರಾಧವೆಸಗುವ ಸಮಾನ ಉದ್ದೇಶದಿಂದ 1 ನೇ ಆರೋಪಿಯಾದ ನೀವು ದೊಣ್ಣೆಯಿಂದ ಚಾಸಾ-1 ರವರ ಬಲರಟ್ಟೆಗೆ ಹೊಡೆದು ನೋವುಂಟುಪಡಿಸಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದ್ದು, ನೀವು ಭಾ.ದಂ.ಸಂ.ಕಲಂಃ324 ಸಹವಾಚಕ ಕಲಂಃ149 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಐದನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವುಗಳು ಅಪರಾಧವೆಸಗುವ ಸಮಾನ ಉದ್ದೇಶದಿಂದ 2 ನೇ ಆರೋಪಿಯಾದ ನೀವು ಕಾಲಿನಿಂದ ಚಾಸಾ-1 ರವರ ಹೊಟ್ಟೆಗೆ ಒದ್ದು, 3 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಕೈಯಿಂದ ಮೈ-ಕೈಗೆ ಹೊಡೆದು, 4 ನೇ ಆರೋಪಿಯಾದ ನೀವು ಕಾಲಿನಿಂದ ಒದ್ದು, ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದ್ದು, ನೀವು ಭಾ.ದಂ.ಸಂ.ಕಲಂಃ323 ಸಹವಾಚಕ ಕಲಂಃ149 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಆರನೇಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವುಗಳು ಅಪರಾಧವೆಸಗುವ ಸಮಾನ ಉದ್ದೇಶದಿಂದ 1 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದ್ದು, ನೀವು ಭಾ.ದಂ.ಸಂ.ಕಲಂಃ506 ಸಹವಾಚಕ ಕಲಂಃ149 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲೆ ಹೇಳಿದ ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನನ್ನ ಸಮಕ್ಷಮದಲ್ಲಿ ಪಡೆದುಕೊಳ್ಳಲಾಯಿತು.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಅರಕಲಗೂಡು